# ಭೂತಾನ್‌ನಿಂದ ಬಂದ ಮಿಮಿಕ್



ಮಿಮಿಕ್ ವಾಂಗ್ಮೊ

ಬಿಹಾರದಲ್ಲಿರುವ ಬುದ್ಧಗಯಾ ಒಂದು ಅಂತರರಾಷ್ಟ್ರೀಯ ಪ್ರವಾಸಿ ತಾಣ. ಭಗವಾನ್ ಬುದ್ಧನಿಗೆ ಬೋಧಿವೃಕ್ಷದ ಕೆಳಗೆ ಜ್ಞಾನೋದಯವಾದ ಈ ಜಾಗದಲ್ಲಿ ಮಹಾಬೋಧಿ ದೇವಾಲಯವನ್ನು ಕಟ್ಟಲಾಗಿದೆ. ಇದು ಬೌದ್ಧ ಧರ್ಮೀಯರಿಗೆ ಮಾತ್ರವಲ್ಲದೆ ಜಗತ್ತಿನ ಎಲ್ಲ ಧರ್ಮೀಯರನ್ನು ಸೆಳೆಯುವ ಪವಿತ್ರ ತಾಣ.

ಅಂದ ಹಾಗೆ ನೆರೆಯ ಭೂತಾನ್‌ನಿಂದ ಭಾರತಕ್ಕೆ ಕಾಲೇಜು ವಿದ್ಯಾಭ್ಯಾಸಕ್ಕಾಗಿ ಬಂದವರು ಮಿಮಿಕ್ ವಾಂಗ್ಮೊ. ಇದೀಗ ಬೆಂಗಳೂರಿನ ಹೆಸರಘಟ್ಟ ರಸ್ತೆಯಲ್ಲಿರುವ ಸಪ್ತಗಿರಿ ಕಾಲೇಜಿನಲ್ಲಿ ಮೂರನೇ ವರ್ಷದ ಬಿಎ ಪದವಿಯಲ್ಲಿ ಓದುತ್ತಿರುವ ಮಿಮಿಕ್ ವಾಂಗ್ಮೊ ಗೆ ಬುದ್ಧಗಯಾ ಅತ್ಯಂತ ಪ್ರಿಯವಾದ ಪ್ರವಾಸಿ ತಾಣವಂತೆ. ಮೂಲತಃ ಬೌದ್ಧ ಧರ್ಮಕ್ಕೇ ಸೇರಿದ ಮಿಮಿಕ್, ಭಾರತಕ್ಕೆ ಬಂದು ಮೊದಲು ನೋಡಿದ್ದು ಬುದ್ಧಗಯಾವನ್ನು. ತಮ್ಮ ಕುಟುಂಬದ ಸದಸ್ಯರೊಂದಿಗೆ ಬಂದು ಇದನ್ನು ನೋಡಿದ ಮಿಮಿಕ್ ಅಕ್ಷರಶಃ ಪುಳಕಗೊಂಡರಂತೆ.

ಕಳೆದ ಮೂರು ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿರುವ ಮಿಮಿಕ್ ವಾಂಗ್ಮೊ ಸಪ್ತಗಿರಿ ಕಾಲೇಜಿನ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ. ಮಿಮಿಕ್ ಕುಟುಂಬ ಭೂತಾನ್‌ದಲ್ಲೇ ಇದೆ. ಕಾಲೇಜಿಗೆ ರಜೆ ಸಿಕ್ಕಿದಾಗ ಮಿಮಿಕ್ ಭೂತಾನ್‌ಗೆ ಹೋಗಿ ಬರುತ್ತಾರೆ.

'ಭಾರತದೊಂದಿಗೆ ನನಗೆ ಒಂದು ರೀತಿಯ ಭಾವನಾತ್ಮಕ ಸಂಬಂಧವಿದೆ. ಇಲ್ಲಿನ ಜೀವನಶೈಲಿ ಚೆನ್ನಾಗಿದೆ. ಜನರ ಹೈಟೆಕ್ ಬದುಕು, ಇವರ ಶ್ರೀಮಂತ ಮನೋಭಾವನೆಯನ್ನು ಸೂಚಿಸುತ್ತದೆ. ಶಿಕ್ಷಣ ವ್ಯವಸ್ಥೆ ಅಂತೂ ಅದ್ಭುತ. ಇಲ್ಲಿನ ಕಾಲೇಜುಗಳು ಗುಣಮಟ್ಟದ ಶಿಕ್ಷಣ ನೀಡುತ್ತವೆ. ಮಕ್ಕಳೂ ಬೇಗನೆ ಸ್ನೇಹ ಬಯಸುತ್ತಾರೆ. ಕಾಲೇಜು ಸೇರಿದ ಕೆಲವೇ ದಿನಗಳಲ್ಲಿ ಹತ್ತಾರು ಗೆಳತಿಯರನ್ನು ಪಡೆದೆ. ಇಲ್ಲಿಂದ ಕಾಲೇಜು ಬಿಟ್ಟು ಹೋಗಲೂ ಈಗ ಬೇಸರವಾಗುತ್ತಿದೆ. ಅಷ್ಟು ಚೆನ್ನಾಗಿ ಹೊಂದಾಣಿಕೆ ಮನೋಭಾವ ಇಲ್ಲಿನವರದು. ಸ್ನಾತಕೋತ್ತರ ಪದವಿಯನ್ನೂ ಇಲ್ಲೇ ಮಾಡಬೇಕೆಂದಿದ್ದೇನೆ. ಅಲ್ಲದೆ ಉದ್ಯೋಗ ಸಿಕ್ಕಿದರೆ ಇಲ್ಲೇ ಮಾಡಲು ಇಷ್ಟಪಡುತ್ತೇನೆ' ಎಂದು ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ ಮಿಮಿಕ್.

ಭೂತಾನ್ ಒಂದು ಸಣ್ಣ ದೇಶ. ವಜ್ರಾಯನ ಬುದ್ಧಿಸಮ್ ಇಲ್ಲಿನ ಪ್ರಮುಖ ಧರ್ಮ. ಹಿಂದೂಗಳೂ ಸಾಕಷ್ಟು ಜನರಿದ್ದಾರೆ. ಭೂತಾನಿ ಎಂಬುದು ಇಲ್ಲಿನ ಜನರ ಮಾತೃಭಾಷೆ.

'ವರ್ಷದ ಬಹುತೇಕ ತಿಂಗಳುಗಳಲ್ಲಿ ಹವಾಗುಣ ಶೀತದಿಂದ ಕೂಡಿದ್ದು, ಚಳಿಗಾಲವಲ್ಲದೆ ಮಳೆ, ಬಿಸಿಲುಕಾಲಗಳೂ ಇಲ್ಲಿವೆ. ಜನಸಂಖ್ಯೆ ಅಂದಾಜು 12 ಲಕ್ಷ ಅಷ್ಟೆ. ಜನರ ಆರ್ಥಿಕ ಮಟ್ಟವೂ ಚೆನ್ನಾಗಿದೆ. ಇಲ್ಲಿನ ಕರೆನ್ಸಿ **ngultrum.** ಇದು ಭಾರತೀಯ ಕರೆನ್ಸಿಯ ಬೆಲೆಗೆ ಸಮನಾದದ್ದು. ಪಾರೊ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ರೈಲುಗಳ ವ್ಯವಸ್ಥೆ ಇಲ್ಲಿಲ್ಲ. ಬಸ್ ಸೌಲಭ್ಯ ಚೆನ್ನಾಗಿದೆ' ಎಂದು ತಮ್ಮ ದೇಶದ ಬಗ್ಗೆ ಸಂಕ್ಷಿಪ್ತ ಪರಿಚಯ ನೀಡುತ್ತಾರೆ ಮಿಮಿಕ್.

'ಇಲ್ಲಿನ ಸಂಸ್ಕೃತಿ, ಸಂಪ್ರದಾಯ ಧಾರ್ಮಿಕ ಆಚರಣೆ ಕುತೂಹಲಕಾರಿ. ಕಳೆದ ಮೂರು ವರ್ಷಗಳಿಂದ ಈ ದೇಶದ ಸಂಸ್ಕೃತಿ, ಬಹು ಭಾಷಾ ವೈವಿಧ್ಯತೆ, ಆಚರಣೆಗಳನ್ನು ನೋಡುತ್ತಾ ಬಂದಿದ್ದೇನೆ. ನಮ್ಮ ದೇಶಕ್ಕೂ ಇಲ್ಲಿಗೂ ಹಬ್ಬದ ಆಚರಣೆಯಲ್ಲಿ ಬಹಳ ವ್ಯತ್ಯಾಸವಿದೆ. ಹಬ್ಬಗಳು ಬಂದಾಗ ನಗರದ ಚಿತ್ರಣವೇ ಬದಲಾಗುತ್ತದೆ. ಇದು ನಿಜಕ್ಕೂ ಅದ್ಭುತ ಅನುಭವ ನೀಡಿದೆ' ಎನ್ನುತ್ತಾರೆ ಅವರು.

'ಇಲ್ಲಿನ ಪ್ರವಾಸಿ ತಾಣಗಳು ಕೂಡ ಅದ್ಭುತವಾಗಿವೆ. ಬುದ್ಧನ ಪವಿತ್ರ ತಾಣ ಬೋಧಗಯಾ ನನ್ನ ಅತ್ಯಂತ ಪ್ರಿಯವಾದ ತಾಣ. ಅದು ಬಿಟ್ಟರೆ ಸ್ನೇಹಿತರ ಜತೆಗೆ ಕೇರಳ ಪ್ರವಾಸ ಮಾಡಿದ್ದೇನೆ. ಅದೂ ಮರೆಯಲಾಗದ ಅನುಭವ ನೀಡಿದೆ. ಉತ್ತರ ಭಾರತದ ಕೆಲವು ಜಾಗಗಳಿಗೆ ಭೇಟಿ ನೀಡಿದ್ದೆ. ಇನ್ನೂ ಹಲವು



ಬುದ್ಧಗಯಾದ ಒಂದು ನೋಟ

ಪ್ರವಾಸಿ ಸ್ಥಳಗಳನ್ನು ನೋಡುವ ಆಸೆ ಇದೆ. ಕಾಲೇಜು, ಓದು, ಸ್ನೇಹಿತರ ಜತೆ ಹರಟೆ, ಸಿನಿಮಾ, ಮಾಲ್‌ಗಳನ್ನು ಸುತ್ತುವುದು.. ಹೀಗೆ ವಾರಾಂತ್ಯ ಮೀಸಲಾಗಿರುವುದರಿಂದ ಹೆಚ್ಚಿನ ಜಾಗಗಳನ್ನು ನೋಡಲು ಸಮಯ ಸಾಕಾಗುತ್ತಿಲ್ಲ' ಎನ್ನುವ ಮಿಮಿಕ್‌ಗೆ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವುದರಿಂದ ವಾರಾಂತ್ಯದಲ್ಲೂ ಬಿಡುವು ಸಿಗುತ್ತಿಲ್ಲವಂತೆ. ಆದರೂ ವಾರಪೂರ್ತಿ, ದಿನಪೂರ್ತಿ ಬ್ಯುಸಿ ಆಗಿರುವುದೇ ಮಿಮಿಕ್‌ಗೆ ಇಷ್ಟವಂತೆ.

ಭೂತಾನಿನಲ್ಲಿ ಅಕ್ಕಿ, ಗೋಧಿ ಜೋಳದಿಂದ ತಯಾರಿಸಿದ ಊಟ ತಿಂಡಿ ತಿನ್ನುತ್ತಾರೆ. ಜತೆಗೆ ಹಂದಿ, ದನ, ಯಾಕ್‌ಗಳ ಮಾಂಸ, ಚಿಕನ್, ಮಟನ್ ಕೂಡ ಅತ್ಯಂತ ಜನಪ್ರಿಯ ಆಹಾರ. ಬಟರ್ ಚೀಸ್ ಮೆಚ್ಚಿನ ಆಹಾರ. ಚಿಕನ್ ಸೂಪ್ ಬಹಳ ಪ್ರಸಿದ್ಧಿ ಎಂದು ಆಹಾರ ಸಂಸ್ಕೃತಿ ಬಗ್ಗೆ ಮಾತನಾಡುವ ಮಿಮಿಕ್, ಇಲ್ಲಿನ ಊಟ, ತಿಂಡಿಗಳೂ ಬಹಳ ರುಚಿಕರ. ಅನ್ನದ ಜತೆ ಚೀಸ್–ಚಿಲ್ಲಿ ಬಹಳ ಇಷ್ಟಪಡುತ್ತೇನೆ. ಇದು ಬಿಟ್ಟರೆ ಕುರುಕುಲು ತಿಂಡಿಗಳೂ ಪ್ರಿಯ ಎನ್ನುತ್ತಾರೆ.

★ **ಅವನೀಶ್**